ದೂರವಾಣಿ : 080 - 22263479

ಬೆಂ.ಮ.ಪ್ರಪ್ರಾ

# ಉಪನಗರ ವರ್ತುಲ ರಸ್ತೆ (STRR) ಯೋಜನಾ ಪ್ರಾಧಿಕಾರ

ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರ, ನಂ. 1, ಆಲಿ ಆಸ್ಕರ್ ರಸ್ತೆ, ಬೆಂಗಳೂರು – 560 052.

ಸಂಖ್ಯೆ : STRRPA/TP/LAO/17/2018-19 ದಿನಾಂಕ: 30.09.2021.

30-09-21

**ಅಂತಿಮ ವಸತಿ ವಿನ್ಯಾಸ ಅನುಮೋದನಾ ಪತ್ರ**

**(ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 17(2) ರಡಿಯಲ್ಲಿ)**

ವಿಷಯ : ಆನೇಕಲ್ ತಾಲ್ಲೂಕು, ಅತ್ತಿಬೆಲೆ ಹೋಬಳಿ, ಅತ್ತಿಬೆಲೆ ಗ್ರಾಮದ ಸ.ನಂ.97/1ರಲ್ಲಿ 0–13ಗುಂಟೆ, 100ರಲ್ಲಿ 0–24ಗುಂಟೆ, 102/3ರಲ್ಲಿ 0–03ಗುಂಟೆ, 109/2ರಲ್ಲಿ 0–07ಗುಂಟೆ, 110ರಲ್ಲಿ 1ಎಕರೆ–17ಗುಂಟೆ, 111ರಲ್ಲಿ 1ಎಕರೆ–28ಗುಂಟೆ, 134/2ರಲ್ಲಿ 0–03ಗುಂಟೆ, 82/1ರಲ್ಲಿ 0–04ಗುಂಟೆ, 92ರಲ್ಲಿ 0–30ಗುಂಟೆ, 94/2ರಲ್ಲಿ 0–23ಗುಂಟೆ, 99/2ರಲ್ಲಿ 0–03½ಗುಂಟೆ, 101/3ರಲ್ಲಿ 0–05½ಗುಂಟೆ, 93/1ರಲ್ಲಿ 0–13¼ಗುಂಟೆ, 136ರಲ್ಲಿ 1ಎಕರೆ–26ಗುಂಟೆ, 407ರಲ್ಲಿ 0–07ಗುಂಟೆ, 82/3ರಲ್ಲಿ 0–06½ಗುಂಟೆ, 82/5ರಲ್ಲಿ 0–03ಗುಂಟೆ, 97/2ರಲ್ಲಿ 0–13ಗುಂಟೆ, 98ರಲ್ಲಿ 0–26ಗುಂಟೆ, 99/1ರಲ್ಲಿ 0–09ಗುಂಟೆ, 101/2ರಲ್ಲಿ 0–05½ಗುಂಟೆ ಒಟ್ಟು 9ಎಕರೆ–30¼ಗುಂಟೆ ವಿಸ್ತೀರ್ಣ ಪ್ರದೇಶದಲ್ಲಿ ತಾತ್ಕಾಲಿಕ ಅನುಮೋದನೆಯಾಗಿರುವ ವಸತಿ ವಿನ್ಯಾಸಕ್ಕೆ ಅಂತಿಮ ಅನುಮೋದನೆ ನೀಡಿ, ವಸತಿ ನಿವೇಶನಗಳನ್ನು ನೋಂದಣಿಗಾಗಿ ಬಿಡುಗಡೆ ಮಾಡಲು ಕೋರಿರುವ ಬಗ್ಗೆ.

ಉಲ್ಲೇಖ:
1. ಅರ್ಜಿದಾರರ ದಿನಾಂಕ: 06.06.2019ರ ಅರ್ಜಿ.
2. ದಿನಾಂಕ: 18.06.2019ರಂದು ನಡೆದ ಉಪನಗರ ವರ್ತುಲ ರಸ್ತೆ (STRR) ಯೋಜನಾ ಪ್ರಾಧಿಕಾರದ 14ನೇ ಸಭೆಯ ವಿಷಯ ಸಂಖ್ಯೆ: 14.34ರ ನಡವಳಿಕೆ.
3. ಶುಲ್ಕ ಪಾವತಿ ರಸೀದಿ ಸಂಖ್ಯೆ: 1542, 1543 ದಿನಾಂಕ: 03.05.2019 ಮತ್ತು 1713, ದಿನಾಂಕ: 23.07.2019.
4. ಈ ಪ್ರಾಧಿಕಾರದ ತಾತ್ಕಾಲಿಕ ವಸತಿ ವಿನ್ಯಾಸ ಅನುಮೋದನಾ ಪತ್ರ ಸಂಖ್ಯೆ: STRRPA/TP/LAO/17/2018-19, ದಿನಾಂಕ: 21.09.2019.
5. ಅರ್ಜಿದಾರರ ಮನವಿ ದಿನಾಂಕ: 22.06.2021
6. ದಿನಾಂಕ: 23.06.2021ರಂದು ನಡೆದ ಉಪನಗರ ವರ್ತುಲ ರಸ್ತೆ (STRR) ಯೋಜನಾ ಪ್ರಾಧಿಕಾರದ 21ನೇ ಸಭೆಯ ವಿಷಯ ಸಂಖ್ಯೆ: 21.43(3)ರ ನಡವಳಿಕೆ.
7. ಉಪನಗರ ವರ್ತುಲ ರಸ್ತೆ ಯೋಜನಾ ಪ್ರಾಧಿಕಾರಕ್ಕೆ ಶುಲ್ಕ ಪಾವತಿಸಿದ ಪರಿಶೀಲನಾ ಶುಲ್ಕ, ನಕ್ಷೆ ಶುಲ್ಕ ರೂ. 40,600/–, ರಶೀದಿ. 2769 ದಿನಾಂಕ: 29.07.2021.
8. ಉದ್ಯಾನವನ ಮತ್ತು ರಸ್ತೆಗಾಗಿ ಕಾಯ್ದಿರಿಸಿದ ಜಾಗದ ಪರಿತ್ಯಾಜನಾ ಪತ್ರ ದಿನಾಂಕ:13.09.2021.

NOTARY THROUGHOUT BENGALURU Reg. No. 12416 GOVT. OF INDIA

*******

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಆನೇಕಲ್ ತಾಲ್ಲೂಕು, ಅತ್ತಿಬೆಲೆ ಹೋಬಳಿ, ಅತ್ತಿಬೆಲೆ ಗ್ರಾಮದ ಸ.ನಂ.97/1ರಲ್ಲಿ 0–13ಗುಂಟೆ, 100ರಲ್ಲಿ 0–24ಗುಂಟೆ, 102/3ರಲ್ಲಿ 0–03ಗುಂಟೆ, 109/2ರಲ್ಲಿ 0–07ಗುಂಟೆ, 110ರಲ್ಲಿ 1ಎಕರೆ–17ಗುಂಟೆ, 111ರಲ್ಲಿ 1ಎಕರೆ–28ಗುಂಟೆ, 134/2ರಲ್ಲಿ 0–03ಗುಂಟೆ, 82/1ರಲ್ಲಿ 0–04ಗುಂಟೆ, 92ರಲ್ಲಿ 0–30ಗುಂಟೆ, 94/2ರಲ್ಲಿ 0–23ಗುಂಟೆ, 99/2ರಲ್ಲಿ 0–03½ಗುಂಟೆ, 101/3ರಲ್ಲಿ 0–05½ಗುಂಟೆ, 93/1ರಲ್ಲಿ 0–13¼ಗುಂಟೆ, 136ರಲ್ಲಿ 1ಎಕರೆ–26ಗುಂಟೆ, 407ರಲ್ಲಿ 0–07ಗುಂಟೆ, 82/3ರಲ್ಲಿ 0–06½ಗುಂಟೆ, 82/5ರಲ್ಲಿ 0–03ಗುಂಟೆ, 97/2ರಲ್ಲಿ 0–13ಗುಂಟೆ,

98ರಲ್ಲಿ 0-26ಗುಂಟೆ, 99/1ರಲ್ಲಿ 0-09ಗುಂಟೆ, 101/2ರಲ್ಲಿ 0-05½ಗುಂಟೆ ಒಟ್ಟು 9ಎಕರೆ-30¼ಗುಂಟೆ ವಿಸ್ತೀರ್ಣದ ಜಮೀನುಗಳಿಗೆ ಉಲ್ಲೇಖ (1)ರಲ್ಲಿನ ಅರ್ಜಿಯಲ್ಲಿ ವಸತಿ ವಿನ್ಯಾಸ ಅನುಮೋದನೆ ಕೋರಿ, ಈ ಪ್ರಾಧಿಕಾರಕ್ಕೆ ಮನವಿಯನ್ನು ಸಲ್ಲಿಸಲಾಗಿತ್ತು. ಉಲ್ಲೇಖ (2)ರಲ್ಲಿನ ಈ ಪ್ರಾಧಿಕಾರದ ಸಭೆಯ ನಡವಳಿಕೆಯಲ್ಲಿ ವಸತಿ ವಿನ್ಯಾಸವನ್ನು ತಾತ್ಕಾಲಿಕವಾಗಿ ಅನುಮೋದಿಸಲು ತೀರ್ಮಾನಿಸಲಾಗಿತ್ತು. ಅರ್ಜಿದಾರರು ಉಲ್ಲೇಖ (3)ರಲ್ಲಿ ನಿಗಧಿತ ಶುಲ್ಕವನ್ನು ಈ ಪ್ರಾಧಿಕಾರಕ್ಕೆ ಪಾವತಿಸಿರುತ್ತಾರೆ. ಅದರಂತೆ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 17(1) ರ ಅಡಿಯಲ್ಲಿ ವಸತಿ ವಿನ್ಯಾಸವನ್ನು ಅಭಿವೃದ್ಧಿಪಡಿಸಲು ಉಲ್ಲೇಖ (4)ರಲ್ಲಿನ ಪತ್ರದಲ್ಲಿ ತಾತ್ಕಾಲಿಕ ಅನುಮೊದನೆ ನೀಡಲಾಗಿರುತ್ತದೆ.

ಉಲ್ಲೇಖ (6)ರಲ್ಲಿನ ಅರ್ಜಿಯಲ್ಲಿ ಸದರಿ ವಸತಿ ವಿನ್ಯಾಸದ ಅಭಿವೃದ್ಧಿ ಕಾಮಗಾರಿಗಳನ್ನು ಪೂರ್ತಿಯಾಗಿ ಕಾರ್ಯಗತಗೊಳಿಸಿರುವುದಾಗಿ ತಿಳಿಸುತ್ತಾ, ವಸತಿ ವಿನ್ಯಾಸದ ಅಂತಿಮ ಅನುಮೋದನೆ ಹಾಗೂ ನಿವೇಶನಗಳನ್ನು ನೋಂದಣಿಗಾಗಿ ಬಿಡುಗಡೆ ಮಾಡುವಂತೆ ಕೋರಲಾಗಿರುತ್ತದೆ. ಸದರಿ ವಸತಿ ವಿನ್ಯಾಸದ ವಿದ್ಯುದೀಕರಣ ಕಾಮಗಾರಿಗಳ ಬಗ್ಗೆ ಸಹಾಯಕ ಕಾರ್ಯಪಾಲಕ ಇಂಜಿನಿಯರ್ (ಇಎಲ್‌ಇ), ಬೆಸ್ಕಾಂ, ಅತ್ತಿಬೆಲೆ ಉಪವಿಭಾಗ ರವರ ಪ್ರಮಾಣಪತ್ರ, ಪ್ರಸ್ತಾಪಿಸಿರುವ ಬಡಾವಣೆ ಜಮೀನಿನ ಸ್ವತ್ತುಗಳಿಗೆ ಸಂಬಂಧಿಸಿದಂತೆ ಯಾವುದೇ ಹಕ್ಕು ದಾಖಲೆ ಮಾಡಿರುವುದಿಲ್ಲ ಎಂದು ಮುಖ್ಯಾಧಿಕಾರಿಗಳು, ಅತ್ತಿಬೆಲೆ ಪುರಸಭಾ ಕಾರ್ಯಾಲಯ ರವರ ದೃಢೀಕರಣ ಪತ್ರ, ಸದರಿ ವಸತಿ ವಿನ್ಯಾಸದಲ್ಲಿನ ಸಿವಿಲ್ ಕಾಮಗಾರಿಗಳಾದ ರಸ್ತೆ, ಚರಂಡಿಗಳು, ಕಲ್ವರ್ಟ್ ಪಾದಚಾರಿ ಮಾರ್ಗ ಮತ್ತು ಇತರೆ ಕಾಮಗಾರಿಗಳು ಪೂರ್ಣಗೊಂಡಿರುವ ಬಗ್ಗೆ ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಪಂಚಾಯತ್ ರಾಜ್ ಇಂಜನಿಯರಿಂಗ್ ಉಪ ವಿಭಾಗ, ಆನೇಕಲ್ ಇವರ ದೃಢೀಕರಣ ಪತ್ರ ಹಾಗೂ ವಸತಿ ಬಡಾವಣೆಯಲ್ಲಿ ಉದ್ಯಾನವನವನ್ನು ನಿರ್ಮಿಸಿರುವ ಬಗ್ಗೆ ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು (ಜಿಲ್ಲಾ ಪಂಚಾಯತ್), ಆನೇಕಲ್ ತಾಲ್ಲೂಕು ರವರ ನಿರಾಕ್ಷೇಪಣಾ ಪತ್ರಗಳನ್ನು ಸಲ್ಲಿಸಿರುತ್ತಾರೆ.

ಉಲ್ಲೇಖ (7)ರಲ್ಲಿನ 23.06.2021ರಂದು ನಡೆದ ಉಪನಗರ ವರ್ತುಲ ರಸ್ತೆ (STRR) ಯೋಜನಾ ಪ್ರಾಧಿಕಾರದ 21ನೇ ಸಭೆಯ ವಿಷಯ ಸಂಖ್ಯೆ: 21.43(3)ರ ನಡವಳಿಕೆಯಲ್ಲಿ ಆನೇಕಲ್ ತಾಲ್ಲೂಕು, ಅತ್ತಿಬೆಲೆ ಹೋಬಳಿ, ಅತ್ತಿಬೆಲೆ ಗ್ರಾಮದ ಸ.ನಂ.97/1ರಲ್ಲಿ 0-13ಗುಂಟೆ, 100ರಲ್ಲಿ 0-24ಗುಂಟೆ, 102/3ರಲ್ಲಿ 0-03ಗುಂಟೆ, 109/2ರಲ್ಲಿ 0-07ಗುಂಟೆ, 110ರಲ್ಲಿ 1ಎ-17ಗುಂಟೆ, 111ರಲ್ಲಿ 1ಎ-28ಗುಂಟೆ, 134/2ರಲ್ಲಿ 0-03ಗುಂಟೆ, 82/1ರಲ್ಲಿ 0-04ಗುಂಟೆ, 92ರಲ್ಲಿ 0-30ಗುಂಟೆ, 94/2ರಲ್ಲಿ 0-23ಗುಂಟೆ, 99/2ರಲ್ಲಿ 0-03.50ಗುಂಟೆ, 101/3ರಲ್ಲಿ 0-05.50ಗುಂಟೆ, 93/1ರಲ್ಲಿ 0-13.25ಗುಂಟೆ, 136ರಲ್ಲಿ 1ಎ-26ಗುಂಟೆ, 407ರಲ್ಲಿ 0-07ಗುಂಟೆ, 82/3ರಲ್ಲಿ 0-06.50ಗುಂಟೆ, 82/5ರಲ್ಲಿ 0-03ಗುಂಟೆ, 97/2ರಲ್ಲಿ 0-13ಗುಂಟೆ, 98ರಲ್ಲಿ 0-26ಗುಂಟೆ, 99/1ರಲ್ಲಿ 0-09ಗುಂಟೆ, 101/2ರಲ್ಲಿ 0-05.50ಗುಂಟೆ ಒಟ್ಟು 9ಎ-30.25ಗುಂಟೆ ವಿಸ್ತೀರ್ಣದ ಜಮೀನಿನಲ್ಲಿ ತಾತ್ಕಾಲಿಕ ಅನುಮೋದಿತ ವಸತಿ ವಿನ್ಯಾಸ ನಕ್ಷೆಯಲ್ಲಿ ಅಲ್ಪ ಬದಲಾವಣೆಗಳೊಂದಿಗೆ ಅಭಿವೃದ್ಧಿಗೊಳಿಸಿ ಸಲ್ಲಿಸಿರುವ ವಸತಿ ವಿನ್ಯಾಸ ನಕ್ಷೆಗೆ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 17(2ಬಿ)ರ ಅಡಿಯಲ್ಲಿ ನೋಂದಣಿ ಉದ್ದೇಶಕ್ಕಾಗಿ ಅಂತಿಮ ಅನುಮೋದನೆ ನೀಡಲು ತೀರ್ಮಾನಿಸಲಾಯಿತು. ಉಲ್ಲೇಖ (8)ರಲ್ಲಿ ವಸತಿ ವಿನ್ಯಾಸ ನಕ್ಷೆಯಲ್ಲಿನ ಉದ್ಯಾನವನ ಹಾಗೂ ರಸ್ತೆಗಳ ಜಾಗಗಳನ್ನು ಅತ್ತಿಬೆಲೆ ಪುರಸಭಾ ಕಾರ್ಯಾಲಯಕ್ಕೆ ಮುಫತ್ತಾಗಿ ನೋಂದಾಯಿತ ಪರಿತ್ಯಾಜನಾ ಪತ್ರದ ಮೂಲಕ ಹಸ್ತಾಂತರಿಸಲಾಗಿರುತ್ತದೆ.

NOTARY S.R. THULASIKRISHNA M.A., L.L.B. THROUGH OUT BENGALURU Reg. No. 12415 GOVT. OF INDIA

..3..

ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ, ಆನೇಕಲ್ ತಾಲ್ಲೂಕು, ಅತ್ತಿಬೆಲೆ ಹೋಬಳಿ, ಅತ್ತಿಬೆಲೆ ಗ್ರಾಮದ ಸ.ನಂ.97/1ರಲ್ಲಿ 0-13ಗುಂಟೆ, 100ರಲ್ಲಿ 0-24ಗುಂಟೆ, 102/3ರಲ್ಲಿ 0-03ಗುಂಟೆ, 109/2ರಲ್ಲಿ 0-07ಗುಂಟೆ, 110ರಲ್ಲಿ 1ಎ-17ಗುಂಟೆ, 111ರಲ್ಲಿ 1ಎ-28ಗುಂಟೆ, 134/2ರಲ್ಲಿ 0-03ಗುಂಟೆ, 82/1ರಲ್ಲಿ 0-04ಗುಂಟೆ, 92ರಲ್ಲಿ 0-30ಗುಂಟೆ, 94/2ರಲ್ಲಿ 0-23ಗುಂಟೆ, 99/2ರಲ್ಲಿ 0-03.50ಗುಂಟೆ, 101/3ರಲ್ಲಿ 0-05.50ಗುಂಟೆ, 93/1ರಲ್ಲಿ 0-13.25ಗುಂಟೆ, 136ರಲ್ಲಿ 1ಎ-26ಗುಂಟೆ, 407ರಲ್ಲಿ 0-07ಗುಂಟೆ, 82/3ರಲ್ಲಿ 0-06.50ಗುಂಟೆ, 82/5ರಲ್ಲಿ 0-03ಗುಂಟೆ, 97/2ರಲ್ಲಿ 0-13ಗುಂಟೆ, 98ರಲ್ಲಿ 0-26ಗುಂಟೆ, 99/1ರಲ್ಲಿ 0-09ಗುಂಟೆ, 101/2ರಲ್ಲಿ 0-05.50ಗುಂಟೆ ಒಟ್ಟು 9ಎ-30.25ಗುಂಟೆ ವಿಸ್ತೀರ್ಣದ ಜಮೀನುಗಳಲ್ಲಿ ವಸತಿ ವಿನ್ಯಾಸ ನಕ್ಷೆಗೆ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 17(2)(ಬಿ)ರ ಅಡಿಯಲ್ಲಿ ಈ ಕೆಳಕಂಡ ನಿಬಂಧನೆಗಳಿಗೊಳಪಟ್ಟು ಅಂತಿಮ ಅನುಮೋದನೆ ನೀಡಿ, ವಸತಿ ವಿನ್ಯಾಸದಲ್ಲಿನ ಎಲ್ಲಾ ನಿವೇಶನಗಳನ್ನು ನೋಂದಣಿಗಾಗಿ ಬಿಡುಗಡೆ ಮಾಡಲಾಗಿದೆ.

## ಷರತ್ತುಗಳು

1) ಅಂತಿಮ ಅನುಮೋದನೆಯಾದ ವಿನ್ಯಾಸದಲ್ಲಿ ಪ್ರಾಧಿಕಾರದ ಪೂರ್ವಾನುಮತಿ ಇಲ್ಲದೇ ಯಾವುದೇ ಬದಲಾವಣೆಗಳನ್ನು ಮಾಡತಕ್ಕದಲ್ಲ.
2) ಈ ಪ್ರದೇಶದಲ್ಲಿ ಹಾಲಿ ಇರುವ ಗಿಡಮರಗಳನ್ನು ಸಾಧ್ಯವಾದಷ್ಟು ಮಟ್ಟಿಗೆ ಉಳಿಸಿಕೊಳ್ಳತಕ್ಕದ್ದು ಮತ್ತು ರಸ್ತೆಗಳ ಎರಡೂ ಕಡೆ ಹಾಗೂ ಉದ್ಯಾನವನಗಳಲ್ಲಿ ಹೊಸ ಸಸಿಗಳನ್ನು ಬೆಳೆಸುವುದು.
3) ಅನುಮೋದಿತ ವಿನ್ಯಾಸದಲ್ಲಿರುವ ರಸ್ತೆಗಳು, ಉದ್ಯಾನವನವನ್ನು ಈ ಪ್ರಾಧಿಕಾರದಿಂದ ತಿಳಿಸುವವರೆಗೆ ನಿರ್ವಹಣೆಯನ್ನು ಮಾಡತಕ್ಕದ್ದು ಹಾಗೂ ಸಾರ್ವಜನಿಕ ಸೌಲಭ್ಯಕ್ಕೆ ಕಾಯ್ದಿರಿಸಿದ ಪ್ರದೇಶಗಳನ್ನು ಒತ್ತುವರಿಯಾಗದಂತೆ ಸಂರಕ್ಷಿಸತಕ್ಕದ್ದು.
4) ಸದರಿ ವಿನ್ಯಾಸದಲ್ಲಿ ಘನತ್ಯಾಜ್ಯ ನಿರ್ವಹಣೆಗಾಗಿ ಪ್ರತ್ಯೇಕ ಸ್ಥಳ ಕಾಯ್ದಿರಿಸತಕ್ಕದ್ದು.
5) ವಿನ್ಯಾಸದಲ್ಲಿನ ರಸ್ತೆಗಳಿಂದ ಅಕ್ಕ-ಪಕ್ಕದ ಜಮೀನುಗಳಿಗೆ ಇರುವ ಸಂಪರ್ಕವನ್ನು ಯಾವುದೇ ಕಾರಣಕ್ಕೂ ನಿರ್ಬಂಧಿಸತಕ್ಕದ್ದಲ್ಲ.
6) ಸದರಿ ಅನುಮೋದನೆಯನ್ನು ಸಲ್ಲಿಸಿರುವ ದಾಖಲೆಗಳ ಆಧಾರದ ಮೇಲೆ ತಾಂತ್ರಿಕವಾಗಿ ಪರಿಶೀಲಿಸಿ ಅನುಮೋದನೆ ನೀಡಿರುವುದರಿಂದ ಸದರಿ ಅನುಮೋದನೆಯನ್ನು ಮಾಲೀಕತ್ವದ ದಾಖಲೆಯೆಂದು ದೃಢೀಪಡಿಸಿಕೊಳ್ಳಲು ಉಪಯೋಗಿಸತಕ್ಕದ್ದಲ್ಲ.
7) ಸದರಿ ಜಮೀನಿಗೆ ಸಂಬಂಧಿಸಿದಂತೆ ಯಾವುದೇ ಸಿವಿಲ್ ವ್ಯಾಜ್ಯಗಳಿಗೆ ಪ್ರಾಧಿಕಾರವು ಜವಾಬ್ದಾರಿಯಾಗಿರುವುದಿಲ್ಲ.
8) ಈ ವಿನ್ಯಾಸದಲ್ಲಿ ಬರುವ ನಿವೇಶನಗಳ ಮಾರಾಟ ಸಂಬಂಧ ನೀಡುವ ವಿಚಾರದಲ್ಲಿ ಪ್ರಾಧಿಕಾರದಿಂದ ಅನುಮೋದನೆ ಆಗಿರುವ ಅನುಮೋದನೆ ಸಂಖ್ಯೆ ಮತ್ತು ದಿನಾಂಕವನ್ನು ಕಡ್ಡಾಯವಾಗಿ ನಮೂದಿಸತಕ್ಕದ್ದು.
9) ನೈಸರ್ಗಿಕವಾಗಿ ಹರಿಯುವ ನದಿ/ಹಳ್ಳ/ಕೆರೆ ಮುಂತಾದವುಗಳಿಗೆ ವಿನ್ಯಾಸದ ಯಾವುದೇ ಮಲಿನ ನೀರನ್ನು ಬಿಡಬಾರದು.
10) ಈ ಅನುಮೋದಿತ ವಸತಿ ವಿನ್ಯಾಸ ನಕ್ಷೆ ಪ್ರದೇಶದಲ್ಲಿ ಬರುವ 'ಬಿ' ಖರಾಬು ಜಮೀನುಗಳು ಸರ್ಕಾರಕ್ಕೆ ಸೇರಿರುತ್ತದೆ. ಈ ಜಮೀನುಗಳನ್ನು ಯಥಾಸ್ಥಿತಿಯಂತೆ ಕಾಪಾಡತಕ್ಕದ್ದು ಹಾಗೂ ಅತಿಕ್ರಮಣ ಮಾಡಬಾರದು ಮತ್ತು ಇತರೆ ಉದ್ದೇಶಗಳಿಗಾಗಿ ಉಪಯೋಗಿಸತಕ್ಕದ್ದಲ್ಲ.
11) ಸದರಿ ವಿನ್ಯಾಸದ ಸುತ್ತಲೂ ಕಾಂಪೌಂಡ್ ನಿರ್ಮಿಸಿ ಗೇಟ್ ಅನ್ನು ಅಳವಡಿಸಿ ಗೇಟೆಡ್ ಕಮ್ಯೂನಿಟಿ ಎಂಬ ಹೆಸರಿನಲ್ಲಿ ನಿವೇಶನಗಳನ್ನು ಮಾರಾಟ ಮಾಡುವುದನ್ನು ನಿಷೇಧಿಸಲಾಗಿದೆ ಹಾಗೂ ಸದರಿ ವಿನ್ಯಾಸದಲ್ಲಿನ ರಸ್ತೆ, ಪಾದಚಾರಿ ಮಾರ್ಗ ಹಾಗೂ ಉದ್ಯಾನವನಗಳು ಸಾರ್ವಜನಿಕ ಸ್ವತ್ತಾಗಿರುತ್ತದೆ. ಆದ್ದರಿಂದ, ಸಾರ್ವಜನಿಕ ಸ್ವತ್ತುಗಳನ್ನು ಸಾರ್ವಜನಿಕರಿಗೆ ಮುಕ್ತವಾಗಿಡತಕ್ಕದ್ದು.

NOTARY S.R. THULASIKRISHNA M.A. LL.B. THROUGH OUT BENGALURU Reg. No. 12416 GOVT. OF INDIA

..4..

12) ಬಡಾವಣೆ ನಕ್ಷೆಗೆ ಸಲ್ಲಿಸಿರುವ ದಾಖಲೆಗಳ ಆಧಾರದ ಮೇಲೆ ಅನುಮೋದನೆ ನೀಡಿರುವುದರಿಂದ ಮುಂದಿನ ದಿನಗಳಲ್ಲಿ ಸದರಿ ಜಮೀನುಗಳ ಮಾಲೀಕತ್ವಕ್ಕೆ ಸಂಬಂಧಿಸಿದಂತೆ ತಂಟೆ ತಕರಾರು ಅಥವಾ ಸಿವಿಲ್ ವ್ಯಾಜ್ಯಗಳು ಉದ್ಭವವಾದ್ದಲ್ಲಿ ಬಡಾವಣೆ ಮಾಲೀಕರೇ ಹೊಣೆಗಾರರಾಗಿರುತ್ತಾರೆ.

13) ವಿನ್ಯಾಸ ಅಂಗೀಕಾರ ಕೋರಿಕೆ ಸಂಬಂಧ ಸಲ್ಲಿಸಲಾಗಿರುವ ದಾಖಲೆ ಅಥವಾ ಬೇರೆ ಯಾವುದೇ ಮಾಹಿತಿಗಳು ತಪ್ಪಾಗಿದ್ದಲ್ಲಿ, ಮೇಲ್ಕಂಡ ಯಾವುದೇ ಷರತ್ತುಗಳನ್ನು ಉಲ್ಲಂಘಿಸಿದಂತೆ ಈ ಅನುಮೋದನೆಯು ಯಾವ ಪೂರ್ವ ಸೂಚನೆಯೂ ಇಲ್ಲದೇ ತಂತಾನೆ ರದ್ದಾಗುತ್ತದೆ.

14) ಮೇಲ್ಕಂಡ ಯಾವುದೇ ಷರತ್ತುಗಳನ್ನು ಹಾಗೂ ಇತರೇ ಯಾವುದೇ ಇಲಾಖೆಗಳು ವಿಧಿಸುವ ಷರತ್ತುಗಳನ್ನು ಉಲ್ಲಂಘಿಸಿದಲ್ಲಿ ಪ್ರಾಧಿಕಾರವು ನೀಡಿರುವ ಮಂಜೂರಾತಿಯು ಕೂಡಲೇ ರದ್ದಾಗುವುದು.

15) ಈ ಪ್ರಾಧಿಕಾರದ ಪೂರ್ವಾನುಮತಿ ಪಡೆಯದೇ ಈ ವಸತಿ ವಿನ್ಯಾಸದಲ್ಲಿ ಯಾವುದೇ ಬದಲಾವಣೆಯನ್ನು ಮಾಡಬಾರದು ಹಾಗೂ ಅನುಮೋದನೆ ನೀಡಲಾದ ನಿರ್ದಿಷ್ಟ ಬಳಕೆಗೆ ಮಾತ್ರ ಉಪಯೋಗಿಸತಕ್ಕದ್ದು.

16) ಈ ವಿನ್ಯಾಸದಲ್ಲಿನ ಉದ್ಯಾನವನ ನಾಗರೀಕ ಸೌಲಭ್ಯದ ಜಾಗಗಳು ಮತ್ತು ರಸ್ತೆಗಳು ಸಾರ್ವಜನಿಕ ಸ್ವತ್ತಾಗಿರುತ್ತದೆ ಆದ್ದರಿಂದ ಈ ಸಾರ್ವಜನಿಕ ಸ್ವತ್ತುಗಳನ್ನು ಸಾರ್ವಜನಿಕರಿಗೆ ಮುಕ್ತವಾಗಿಡತಕ್ಕದ್ದು.

17) ಈ ಅನುಮೋದನೆಯು ಜಮೀನಿನ ಮೇಲಿರುವ ಹಕ್ಕನ್ನು ಅಥವಾ ಮಾಲೀಕತ್ವವನ್ನು ನಿರೂಪಿಸುವ ಸಲುವಾಗಿ ಉಪಯೋಗಿಸಲು ಬರುವುದಿಲ್ಲ ಹಾಗೂ ಈ ಜಮೀನುಗಳಿಗೆ ಸಂಬಂಧಿಸಿದ ಯಾವುದೇ ಸಿವಿಲ್ ವ್ಯಾಜ್ಯಗಳಿಗೆ ಈ ಪ್ರಾಧಿಕಾರವು ಹೊಣೆಯಾಗುವುದಿಲ್ಲ.

18) ಪ್ರಸ್ತಾವಿತ ಜಮೀನುಗಳು ಯಾವುದೇ ಭೂ ಸ್ವಾಧೀನಕ್ಕೆ ಒಳಪಟ್ಟಿದ್ದಲ್ಲಿ ಈ ಪ್ರಾಧಿಕಾರವು ಜವಬ್ದಾರಿಯಾಗಿರುವುದಿಲ್ಲ.

19) ಒಂದು ವೇಳೆ ಸರ್ಕಾರವು ಪೂರ್ವಾನ್ವಯವಾಗುವಂತೆ ನಿಗಧಿಪಡಿಸುವ ಇತರೆ ಯಾವುದೇ ಶುಲ್ಕಗಳನ್ನು ಅರ್ಜಿದಾರರು ಪ್ರಾಧಿಕಾರಕ್ಕೆ ಪಾವತಿಸತಕ್ಕದ್ದು.

20) ಸರ್ಕಾರದ ಸುತ್ತೋಲೆ ಸಂಖ್ಯೆ: ನಅಇ 209 ಬಿಎಂಆರ್ 2016, ದಿನಾಂಕ: 31.03.2017 ರ ರೀತ್ಯ ಪತ್ರಿಕೆ, ಮಾಧ್ಯಮ, ಜಾಹೀರಾತು ಪ್ರಕಟಣೆಗಳಲ್ಲಿ ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರದ ಹೆಸರನ್ನು ದುರ್ಬಳಕೆ ಮಾಡಿಕೊಳ್ಳುವಂತಿಲ್ಲ. ತಪ್ಪು ಮಾಹಿತಿ ಪ್ರಕಟಿಸದೇ ಅನುಮೋದನೆ ಪಡೆದುಕೊಂಡಿರುವ ಯೋಜನಾ ಪ್ರಾಧಿಕಾರದ ಹೆಸರನ್ನು ಮಾತ್ರ ನಮೂದಿಸತಕ್ಕದ್ದು.

21) ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ರಚಿಸಿರುವ Direction under section 18(1)(b) of Water (Prevention & Control of Pollution) Act, 1974ರ ಕಾಯ್ದೆಯಲ್ಲಿ ರೂಪಿಸಿರುವ ನಿಯಮದಂತೆ ಕ್ರಮ ಕೈಗೊಳ್ಳಲು ಸೂಚಿರುವಂತೆ ಈ ಕೆಳಕಂಡ ಅಂಶಗಳನ್ನು ಕಡ್ಡಾಯವಾಗಿ ಪಾಲಿಸಲು ಸೂಚಿಸಲಾಗಿದೆ.

   i. ಮಳೆ ನೀರು ಗಾಲುವೆಯನ್ನು ಮುಚ್ಚದಂತೆ ಕ್ರಮವಹಿಸುವುದು.
   ii. ಮಳೆ ನೀರು ಗಾಲುವೆಗಳಿಗೆ ಯಾವುದೇ ಕೊಳಚೆ ನೀರು ಹಾಗೂ ಇನ್ನಿತರೆ ತ್ಯಾಜ್ಯ ವಸ್ತುಗಳು ಸೇರ್ಪಡೆಯಾಗದಂತೆ ಕ್ರಮವಹಿಸುವುದು.
   iii. ಕಂದಾಯ ಇಲಾಖೆಯ ದಾಖಲೆಗಳಂತೆ ಇರುವ ಮಳೆ ನೀರು ಗಾಲುವೆಗಳ ಅಳತೆಗಳು ಒತ್ತುವರಿ/ಒತ್ತುವರಿ ಆಗದಂತೆ ಯಥಾವತ್ತಾಗಿ ಕಾಯ್ದಿರಿಸಿಕೊಂಡು ಸರಾಗವಾಗಿ ನೀರು ಹರಿಯಲು ಬೇಕಾದ ಕ್ರಮವಹಿಸುವುದು.
   iv. ಮಳೆ ನೀರು ಗಾಲುವೆಗಳು ತೆರೆದ ಸ್ಥಿತಿಯಲ್ಲಿ ಸ್ವಚ್ಛವಾಗಿರುವಂತೆ ಕ್ರಮವಹಿಸುವುದು.

NOTARY
S. R. THULASIKRISHNA M.A., L.L.B.
THROUGH OUT BENGALURU
Reg. No. 12416
GOVT. OF INDIA

22) ಕರ್ನಾಟಕ ರಿಯಲ್ ಎಸ್ಟೇಟ್ ನಿಯಂತ್ರಣ ಪ್ರಾಧಿಕಾರದಲ್ಲಿ ಅನುಮೋದಿತ ವಿನ್ಯಾಸ/ಬಡಾವಣೆಯನ್ನು ಕಡ್ಡಾಯವಾಗಿ ನೋಂದಣಿ ಮಾಡಿಕೊಳ್ಳತಕ್ಕದ್ದು ಹಾಗೂ ನೋಂದಣಿ ಮಾಡಿಕೊಂಡ ನಂತರವೇ ಅನುಮೋದಿತ ವಿನ್ಯಾಸ/ ಬಡಾವಣೆಯ ನಿರ್ಮಾಣದ ಕುರಿತು ಜಾಹೀರಾತು ನೀಡತಕ್ಕದ್ದು.

23) ಮೇಲ್ಕಂಡ ಯಾವುದೇ ಷರತ್ತುಗಳನ್ನು ಹಾಗೂ ಇತರೆ ಯಾವುದೇ ಪ್ರಾಧಿಕಾರವು ವಿಧಿಸಿರುವ ಷರತ್ತುಗಳನ್ನು ಉಲ್ಲಂಘಿಸಿದಲ್ಲಿ ಪ್ರಾಧಿಕಾರವು ನೀಡಿರುವ ಮಂಜೂರಾತಿಯು ಕೂಡಲೇ ರದ್ದಾಗುವುದು.

ಸದಸ್ಯ ಕಾರ್ಯದರ್ಶಿಗಳು
ಹಾಗೂ ನಗರ ಮತ್ತು ಗ್ರಾಮಾಂತರ ಯೋಜನಾ
ಜಂಟಿ ನಿರ್ದೇಶಕರು,
ಉಪನಗರ ವರ್ತುಲ ರಸ್ತೆ (STRR) ಯೋಜನಾ
ಪ್ರಾಧಿಕಾರ, ಬೆಂಗಳೂರು.

ಇವರಿಗೆ,

ಶ್ರೀಮತಿ ಶಶಿಕಲಾ, ಶ್ರೀ ಉಮೇಶ್ ಕುಮಾರ್,
ಶ್ರೀ ಬಿ.ಪಿ. ನೀಲಕಂಠಯ್ಯ, ಶ್ರೀ ಬಿ.ಪಿ. ಮೃತ್ಯುಂಜಯ
ಇವರ ಪರವಾಗಿ ಜಿಪಿಎದಾರರಾದ ಶ್ರೀ ದಿನೇಶ್ ಕುಮಾರ್,
ಶ್ರೀಮತಿ ವೀಣಾ ಅಮರನಾಥ್, ಶ್ರೀ ಎ. ಯೋಗೇಂದ್ರ ನಾಥ್
ಮತ್ತು ಇತರರು ಇವರ ಪರವಾಗಿ ಜಿಪಿಎದಾರರಾದ
ಶ್ರೀ ಆರ್. ಅಮರನಾಥ್ (ನಾಣಿ) ಹಾಗೂ ಇತರರು,
ಅತ್ತಿಬೆಲೆ ಹೋಬಳಿ, ಆನೇಕಲ್ ತಾಲ್ಲೂಕು.

ಪ್ರತಿಯನ್ನು:

1. ಮುಖ್ಯಾಧಿಕಾರಿಗಳು, ಪುರಸಭೆ ಕಾರ್ಯಾಲಯ ಅತ್ತಿಬೆಲೆ, ಆನೇಕಲ್ ತಾಲ್ಲೂಕು ಇವರಿಗೆ ಅನುಮೋದಿತ ವಸತಿ ವಿನ್ಯಾಸ ನಕ್ಷೆಯ ಎರಡು ಪ್ರತಿಗಳನ್ನು ಈ ಪತ್ರದೊಂದಿಗೆ ಲಗತ್ತಿಸಿ ಕಳುಹಿಸಿದೆ.
2. ಉಪನೋಂದಣಾಧಿಕಾರಿಗಳು, ಅತ್ತಿಬೆಲೆ ಹೋಬಳಿ, ಆನೇಕಲ್ ತಾಲ್ಲೂಕು, ಇವರಿಗೆ ಅನುಮೋದಿತ ವಸತಿ ವಿನ್ಯಾಸ ನಕ್ಷೆಯ ಎರಡು ಪ್ರತಿಗಳನ್ನು ಈ ಪತ್ರದೊಂದಿಗೆ ಲಗತ್ತಿಸಿ ಮುಂದಿನ ಕ್ರಮಕ್ಕಾಗಿ ಕಳುಹಿಸಿದೆ.
3. ಕಛೇರಿ ಪ್ರತಿ.

08 FEB 2022

NOTARY
S.R. THULASIKRISHNA
THROUGHOUT BENGALURU
Reg. No. 12416
GOVT. OF INDIA

CERTIFIED THAT THIS IS A TRUE COPY

S. R. [illegible] KRISHNA
[illegible] L.B.
Govt. [illegible] 12416
No. 840, [illegible] Flat No. 104,
1st 'A' Main, 2nd Phase, BEML Layout 5th Stage,
Rajarajeshwari Nagar, Bengaluru-560098